## ಭವನ ಕೆಡಹುವ ನಿರ್ಧಾರ

ಇವರ ಪ್ರಕಾರ, ಆಮೇಲೆ ತಾವಿರುವುದೆಲ್ಲಿ? ಮನೆಯಲ್ಲಿರುವ ಪುರಾತನ ವಸ್ತುಗಳ ಗತಿಯೇನು? ಭವನವೆ ನಮ್ಮದಲ್ಲ ಅಂದಾಗ, ಮಕ್ಕಳಿಗೆ ವಸ್ತುಗಳನ್ನು ಹರಾಜು ಹಾಕಲು ಇನ್ನಷ್ಟು ಬಲ ಬಂದಂತಾಗದೇ? ಇದೆಲ್ಲದರ ಮೂಲವೆಲ್ಲಿ?

ಎರಡು ದಿನ ಹಾಗೇ ಕಳೆಯಿತು. ದೇಶ್ವಂತರ ಪರಿಚಯದ ರಾಜಕಾರಣಿಯೊಬ್ಬರು ಅಪರೂಪಕ್ಕೆ ಫೋನಲ್ಲಿ ಮಾತಾಡಿದರು. ಭವನವನ್ನು ಕಂಪನಿಯ ಪಾಲುದಾರಿಕೇಲಿ ವಸತಿನಿಲಯವಾಗಿ ಮಾಡುತಿದೀರಂತೆ. ಅಭಿನಂದನೆಗಳು, ಗೋ ಅಹೆಡ್! ಅಂತ ಶ್ಲಾಘಿಸಿದರು. ಮರುದಿನ ಪತ್ರಿಕೆಯೊಂದರ ಒಳಪುಟದಲ್ಲಿ ಈ ವಿಷಯದ ಒಂದು ಕಾಲಂ ಸುದ್ದಿ ಬಂದಿದ್ದನ್ನು ಆನಂದ ತೋರಿಸಿದ. ಆತಂಕ ಶುರುವಾಯಿತು. ಆಗಲೆ ನಿರ್ಧಾರವಾಗಿದೆ ಅನ್ನೋ ರೀತಿಯಲ್ಲಿ ಅಭಿಪ್ರಾಯ ರೂಪುಗೊಳ್ಳತೊಡಗಿತ್ತು. ತಾವ್ಯಾರೂ ಹೊರಗೆ ಒಂದು ಶಬ್ದವನ್ನೂ ಉಸುರಿಲ್ಲ. ಹೇಳಲು ಅಂತಹ ನಿರ್ಧಾರವೆ ಆಗಿಲ್ಲ! ಇದು ಯಾವ್ಯಾವ ಮೂಲೆಯಿಂದ ಎಂತೆಂತಹ ಬದಲಾವಣೆಯನ್ನು ಹುಟ್ಟುಹಾಕುತದೊ ಅನ್ನುವ ಭಯ ಶುರುವಾಯ್ತು. ಆನಂದ ರಾತ್ರಿ ಪಾಟೀಲನಿಗೆ ಫೋನು ಮಾಡಿದ. ‘ಹಿಂದಿನ ಬಾರಿ ಬಂದಾಗ ಒಂದು ಮಾತು ಹೇಳಿದ್ದೆ. ಅದರರ್ಥವೇನು ಹೇಳು’ ಅಂತ ಕೇಳಿದ.

***

ಆನಂದನಿಗೆ ಹಲವರು ಪತ್ರಕರ್ತ ಮಿತ್ರರಿದ್ದರು. ಪತ್ರಕರ್ತರಲ್ಲಿ ಎರಡು ಬಗೆ. ಆ ವೃತ್ತಿಗೆ ಯಾವುದೋ ಒಂದು ಕೆಲಸ ಅಂತ ಜೀವನೋಪಾಯಕ್ಕೆ ಬಂದವರದೊಂದು. ಅವರು ಅಲ್ಲಿ ಇಲ್ಲಿ ಕೆಲವು ಲಿಂಕುಗಳನ್ನಿಟ್ಟುಕೊಂಡು, ಸಿಕ್ಕಿದ್ದಕ್ಕೆ ಒಂದಷ್ಟು ಊಹಿಸಿ ವೈಭವೀಕರಿಸಿ, ಕಾಲಂ ಬರೆದು ಮುಗಿಯಿತು ಅಂತ ಕೂತುಬಿಡುತ್ತಾರೆ. ಮತ್ತೊಂದು ಬಗೆಯವರು ಪತ್ರಿಕೋದ್ಯಮವನ್ನು

